ದಿನಾಂಕಃ 07-03-2023
ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರಿದ ಪಾಟೀ ಸವಾಲುಃ- ಪ್ರತಿವಾದಿ ಪರ Sri K.U.ವಕೀಲರಿಂದಃ**

ಸಣ್ಣಪ್ಪ ಅಲಿಯಾಸ್ ಸಣ್ಣನರಸಿಂಹಯ್ಯರವರು ತಮ್ಮ ಹಿಸ್ಸೆಗೆ ಬಂದ ದಾವಾ 1 ನೇ ಐಟಂ ಸ್ವತ್ತನ್ನು ಪ್ರತ್ಯೇಕವಾಗಿ ಅನುಭವಿಸುತ್ತಿದ್ದರು ಎಂದರೆ ಸರಿಯಲ್ಲ. ಅವರು ಮೃತಪಟ್ಟ ನಂತರ, ಸಣ್ಣಪ್ಪ ಅಲಿಯಾಸ್ ಸಣ್ಣನರಸಿಂಹಯ್ಯರವರ ಹೆಂಡತಿಯಾದ ಲಕ್ಕಮ್ಮರವರು ದಾವಾ 1 ನೇ ಐಟಂ ಸ್ವತ್ತನ್ನು ಅನುಭವಿಸುತ್ತಿದ್ದರು ಎಂದರೆ ಸರಿ . ಸಣ್ಣಪ್ಪ ಅಲಿಯಾಸ್ ಸಣ್ಣನರಸಿಂಹಯ್ಯ ಮತ್ತು ಲಕ್ಕಮ್ಮರವರಿಗೆ ಸಂತಾನ ಇಲ್ಲದಿದ್ದ ಕಾರಣ, 7 ನೇ ಪ್ರತಿವಾದಿ ಅವರ ಯೋಗಕ್ಷೇಮವನ್ನು ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ.

ಗೌರಮ್ಮ ಹಾಗೂ ನಮ್ಮ ನಡುವೆ ವಿಶ್ವಾಸ ಚನಾಗಿರುತ್ತದೆ ಎಂದರೆ ಸಾಕ್ಷಿಯು ಅವರೊಂದಿಗೆ ನನಗೆ ಯಾವುದೇ ವಿಶ್ವಾಸ ಅಥವಾ ಸಂಬಂಧ ಇರುವುದಿಲ್ಲವೆಂದು ನುಡಿದಿರುತ್ತಾರೆ. ನನಗೆ ಗೌಃ ಹಿರಿಯ ಸಿವಿಲ್ ನ್ಯಾಯಾಲಯದಲ್ಲಿ ನಡೆಯುತ್ತಿರುವ ಪ್ರಕರಣದ ಬಗ್ಗೆ ಮಾಹಿತಿಯನ್ನು ಗೌರಮ್ಮರವರೇ ತಿಳಿಸಿರುತ್ತಾರೆ ಎಂದರೆ ಸರಿಯಲ್ಲ, ಸದರಿ ದಾವೆಯನ್ನು ನಾವೇ ಸಲ್ಲಿಸಿರುತ್ತೇವೆ. ಸದರಿ ದಾವೆಯನ್ನು ಈ ದಾವೆಯ 3 ರಿಂದ 6 ನೇ ಪ್ರತಿವಾದಿಯರು ಸಲ್ಲಿಸಿರುತ್ತಾರೆ ಎಂದರೆ ಸಾಕ್ಷಿಯು ಸದರಿ ದಾವೆಯನ್ನು ನಾವು ಐದು ಜನರಾದ ಭಾಗ್ಯಮ್ಮ, ಮಹಾಲಕ್ಷ್ಮಮ್ಮ, ಹನುಮಂತರಾಯ @ ಹನುಮಂತರಾಜು, ನಾನು, ಗಂಗಮ್ಮ ಸೇರಿ ಈ ದಾವೆಯ ವಕೀಲರಾದ ರವಿರವರ ಮೂಲಕ ಸಲ್ಲಿಸಿರುತ್ತೇವೆಂದು ನುಡಿದಿರುತ್ತಾರೆ. ಮೊದಲಿಗೆ ಗೌಃ ಹಿರಿಯ ಸಿವಿಲ್ ನ್ಯಾಯಾಲಯದಲ್ಲಿ ದಾವೆಯನ್ನು ಸಲ್ಲಿಸಿದ್ದು, ಆನಂತರ ಈ ದಾವೆಯನ್ನು ಸಲ್ಲಿಸಲಾಗಿದೆ ಎಂದರೆ ಸರಿ. ನನಗೆ ಗೌಃ ಹಿರಿಯ ಸಿವಿಲ್ ನ್ಯಾಯಾಲಯದಲ್ಲಿರುವ ದಾವೆಯ ಬಗ್ಗೆ ಈ ದಾವೆಯನ್ನು ಸಲ್ಲಿಸುವುದಕ್ಕಿಂತ ಪೂರ್ವದಲ್ಲೇ ಮಾಹಿತಿ ಇತ್ತು ಎಂದರೆ ಸರಿಯಲ್ಲ. ಗೌಃ ಹಿರಿಯ ಸಿವಿಲ್

ನ್ಯಾಯಾಲಯದಲ್ಲಿ ದಾವೆಯನ್ನು ಸಲ್ಲಿಸಲು ನಾವು ಐದು ಜನರಾದ ಭಾಗ್ಯಮ್ಮ, ಮಹಾಲಕ್ಷ್ಮಮ್ಮ, ಹನುಮಂತರಾಯ @ ಹನುಮಂತರಾಜು, ನಾನು, ಗಂಗಮ್ಮರವರು ಮಾಹಿತಿಯನ್ನು ಕೊಟ್ಟಿರುತ್ತೇವೆ. ಸದರಿ ದಾವೆಯನ್ನು ಈ ಮೇಲೆ ಹೇಳಿದ ನಾವು ಐದು ಜನರು ಸೇರಿ ಸಲ್ಲಿಸಿರುತ್ತೇವೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಈ ದಾವೆಯನ್ನು ಸಲ್ಲಿಸಲು ನಾನು ಮತ್ತು ನನ್ನ ತಂಗಿ ಗಂಗಮ್ಮರವರು ವಕೀಲರಿಗೆ ಮಾಹಿತಿಯನ್ನು ನೀಡಿರುತ್ತೇವೆ. ಗೌರಮ್ಮರವರು ನಮ್ಮ ಮನೆ ಮತ್ತು ಜಮೀನನ್ನು ಒತ್ತುವರಿ ಮಾಡಿಕೊಂಡಿರುವ ಕಾರಣ, ನಾನು ಅವರನ್ನು ಪಕ್ಷಗಾರರನ್ನಾಗಿ ಮಾಡಿರುತ್ತೇನೆ. ಗೌರಮ್ಮರವರು ನಮ್ಮ ಮನೆ ಮತ್ತು ಜಮೀನನ್ನು ಒತ್ತುವರಿ ಮಾಡಿಕೊಂಡಿರುವುದನ್ನು ತೋರಿಸುವ ಯಾವುದೇ ದಾಖಲಾತಿಗಳು ಇರುವುದಿಲ್ಲ. ಸಣ್ಣಪ್ಪ ಅಲಿಯಾಸ್ ಸಣ್ಣನರಸಿಂಹಯ್ಯ ಮತ್ತು ಲಕ್ಕಮ್ಮರವರಿಗೆ ಸಂತಾನವಿಲ್ಲದಿದ್ದ ಕಾರಣ ಅವರ ಸಂಪೂರ್ಣ ಯೋಗಕ್ಷೇಮವನ್ನು ಗೌರಮ್ಮ ಮತ್ತು ಭೂತಯ್ಯ ನೋಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಅವರು ಹಾಗೆ ನೋಡಿಕೊಳ್ಳುತ್ತಿದ್ದ ಕಾರಣ, ಲಕ್ಕಮ್ಮರವರ ಭಾಗಕ್ಕೆ ಬಂದ 31 ಗುಂಟೆಯನ್ನು ಭೂತಯ್ಯರವರ ಹೆಸರಿಗೆ ಮರಣ ಶಾಸನದ ಮೂಲಕ ಬರೆದುಕೊಟ್ಟಿರುತ್ತಾರೆ ಎಂದರೆ ಸಾಕ್ಷಿಯು ಸದರಿ ಆಸ್ತಿಯು ನಮ್ಮ ಕುಟುಂಬದ ಸ್ವತ್ತಾಗಿದ್ದು , ಮರಣ ಶಾಸನವು ನಕಲಿ ದಾಖಲೆಯಾಗಿದ್ದು, ಕುಟುಂಬದಲ್ಲಿ ಯಾವುದೇ ವಿಭಾಗವಾಗಿರುವುದಿಲ್ಲವೆಂದು ನುಡಿದಿರುತ್ತಾರೆ. ಲಕ್ಕಮ್ಮನ ಮರಣದ ನಂತರ ಸದರಿ ಸ್ವತ್ತನ್ನು ಭೂತಯ್ಯ , ಭೂತಯ್ಯನ ಮರಣದ ನಂತರ 7 ನೇ ಪ್ರತಿವಾದಿಯದ ಗೌರಮ್ಮರವರು ಸದರಿ ಸ್ವತ್ತಿನ ಸ್ವಾಧೀನಾನುಭವದಲ್ಲಿರುತ್ತಾರೆ ಎಂದರೆ ಸರಿಯಲ್ಲ.

ದಾವಾ ಐಟಂ ನಂ.3 ರ ಉತ್ತರ ಭಾಗದ ಹಳೆಯ ಮನೆಯಲ್ಲಿ ತನ್ನ ಭಾಗದ ಸ್ವತ್ತಿನಲ್ಲಿ ಸಣ್ಣಪ್ಪ , ಲಕ್ಕಮ್ಮ , ಅವರ ನಂತರ ಭೂತಯ್ಯ ಮತ್ತು 7 ನೇ ಪ್ರತಿವಾದಿ ಗೌರಮ್ಮರವರು ವಾಸ ಮಾಡಿಕೊಂಡು

ಬಂದಿರುತ್ತಾರೆ ಎಂದರೆ ಸಾಕ್ಷಿಯು ನಮ್ಮ ದೊಡ್ಡಪ್ಪನಾದ ಸಣ್ಣಪ್ಪರವರು ಕುಟುಂಬ ದೊಡ್ಡದಾಗಿರುವ ಕಾರಣ ಪ್ರತ್ಯೇಕವಾಗಿ ಮನೆ ಕಟ್ಟಿಕೊಂಡು ವಾಸವಾಗಿದ್ದರು ಎಂದು ನುಡಿದಿರುತ್ತಾರೆ. ಸದರಿ ಮನೆ ಈಗ ಅಸ್ತಿತ್ವದಲ್ಲಿರುವುದಿಲ್ಲ ಬಿದ್ದು ಹೋಗಿರುತ್ತದೆ ಎಂದರೆ ಸರಿಯಲ್ಲ.

1977–78 ರ ಪತ್ರಕ್ಕೆ ನನ್ನ ದೊಡ್ಡಮ್ಮರವರಾದ ಲಕ್ಕಮ್ಮ ಸಹಾ ಸಾಕ್ಷಿಯಾಗಿ ಸಹಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಿ.ಪಿ.4 ರಲ್ಲಿರುವ ಸ.ನಂ. 7 ರ ಸ್ವತ್ತು 3 ರಿಂದ 6 ನೇ ಪ್ರತಿವಾದಿಯರ ತಂದೆ ಭೂತಯ್ಯರವರಿಗೆ ಸರ್ಕಾರದಿಂದ ಮಂಜೂರಾಗಿರುತ್ತದೆಂದು ಸಾಕ್ಷಿಯು ಸದರಿ ದಾಖಲೆಯು ನಕಲಿ ಪತ್ರವಾಗಿರುತ್ತದೆಂದು ನುಡಿದಿರುತ್ತಾರೆ. ನಾನುಹಾಜರುಪಡಿಸಿರುವ ನಿ.ಪಿ.18 ರಿಂದ 25 ರ ಕಾಲಂ ನಂ.9 ಮತ್ತು 12 ರಲ್ಲಿರುವ ಭೂತಯ್ಯ S/o ಭೂತಯ್ಯರವರು 4 ರಿಂದ 6 ನೇ ಪ್ರತಿವಾದಿಯರ ತಂದೆಯಾಗಿರುತ್ತಾರೆ ಎಂದರೆ ಸಾಕ್ಷಿಯು ನಕಲಿ ಪತ್ರವನ್ನು ಸೃಷ್ಟಿಸಿರುತ್ತಾರೆಂದು ನುಡಿದಿರುತ್ತಾರೆ. ನಮ್ಮ ತಾತ, ಭೂತಯ್ಯ ಮತ್ತು ನಮ್ಮ ತಂದೆಯ ಕಾಲದಲ್ಲಿ ವಿಭಾಗ ಮಾಡಿಕೊಂಡಿದ್ದು , ವಿಭಾಗ ಮಾಡಿಕೊಂಡ ನಂತರ ದಾವಾ ಐಟಂ ನಂ.2 ಭೂತಯ್ಯರವರಿಗೆ ಸರ್ಕಾರದಿಂದ ಮಂಜೂರಾಗಿರುತ್ತದೆ ಎಂದರೆ ಸರಿಯಲ್ಲ. ಭೂತಯ್ಯರವರ ಮರಣದ ನಂತರ 3 ರಿಂದ 6 ನೇ ಪ್ರತಿವಾದಿಯರು ದಾವಾ ಐಟಂ ನಂ.2 ರಲ್ಲಿ ಸ್ವಾಧೀನಾನುಭವದಲ್ಲಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ನಾವೆಲ್ಲಾ ಒಟ್ಟು ಕುಟುಂಬದಲ್ಲಿರುತ್ತೇವೆಂದು ನುಡಿದಿರುತ್ತಾರೆ.

ನನಗೆ ನನ್ನ ತಾತನ ಜೀವಿತ ಕಾಲದಲ್ಲೇ ವಿಭಾಗವಾಗಿರುವ ಬಗ್ಗೆ ಮತ್ತು ನನ್ನ ತಂದೆ ಭೂತಯ್ಯರವರಿಗೆ ಕ್ರಯಪತ್ರ ಮಾಡಿಕೊಟ್ಟಿರುವ ಬಗ್ಗೆ ಮಾಹಿತಿ ಇದ್ದರೂ ಸಹ ಯಾವುದೇ ಮಾಹಿತಿ ಇರುವುದಿಲ್ಲವೆಂದು ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನುಹಾಜರುಪಡಿಸಿರುವ ದಾಖಲಾತಿಗಳನ್ನು ನಾನು ಈಗ್ಗೆ ಎರಡು ವರ್ಷದಿಂದ ನೋಡುತ್ತಿರುತ್ತೇನೆ. ನನಗೆ ಎಲ್ಲಾ ವಿಚಾರ

ಗೊತ್ತಿದ್ದರೂ ಸಹ ಈ ದಿನ ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ- ಇಲ್ಲಾ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಕಂಪ್ಯೂಟರೀಕರಣಗೊಳಿಸಿ ಪ್ರಿಂಟ್ ತೆಗೆಯಲಾಯಿತು.)

ಓ. ಹೇ. ಕೇ. ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ. ಶಿರಾ.